# ಕರ್ನಾಟಕ ವಿಧಾನ ಪರಿಷತ್ತು

**(ನೂರ ನಲವತ್ತೆರಡನೆಯ ಅಧಿವೇಶನ)**

**ಲಘು ಪ್ರಕಟಣೆ ಭಾಗ–2**

**(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)**

**ಶನಿವಾರ, 05ನೇ ಡಿಸೆಂಬರ್, 2020**

---

ಸಂಖ್ಯೆ: 92

ದಿನಾಂಕ:07.12.2020ರಿಂದ ಪ್ರಾರಂಭವಾಗಲಿರುವ 142ನೇ ಅಧಿವೇಶನದಲ್ಲಿ ಕೋವಿಡ್–19ರ ಹಿನ್ನಲೆಯಲ್ಲಿ ಈ ಕೆಳಕಂಡಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಮಾನ್ಯ ಸದಸ್ಯರುಗಳು ಸಹಕರಿಸಬೇಕೆಂದು ಕೋರಲಾಗಿದೆ.

01. ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಮಾನ್ಯ ಸದಸ್ಯರುಗಳು ಕಡ್ಡಾಯವಾಗಿ ಮಾಸ್ಕ್ ಧರಿಸಿರಬೇಕು (ಮಾನ್ಯ ಸದಸ್ಯರಿಗೆ ಮಾಸ್ಕ್, ಸ್ಯಾನಿಟೈಸರ್ ಒದಗಿಸಲಾಗುವುದು)
02. ಮಾನ್ಯ ಸದಸ್ಯರ ಆಪ್ತ ಸಹಾಯಕರು ಹಾಗೂ ಗನ್ ಮ್ಯಾನ್ ಅವರುಗಳಿಗೆ ವಿಧಾನಸೌಧದ ನೆಲಮಹಡಿಯಲ್ಲಿರುವ ಬ್ಯಾಂಕ್ವೆಟ್ ಹಾಲಿನ ಮುಂಭಾಗದಲ್ಲಿ ಕುಳಿತುಕೊಳ್ಳಲು ಆಸನ ವ್ಯವಸ್ಥೆಗಳನ್ನು ಮಾಡಲಾಗಿರುತ್ತದೆ. (ವಿಧಾನ ಸೌಧದ ಮೊದಲನೇ ಮಹಡಿಯ ಪ್ರವೇಶಕ್ಕೆ ನಿರ್ಬಂಧಿಸಿದೆ)

03. ಪ್ರತಿದಿನ ವಿಧಾನ ಪರಿಷತ್ತಿನ ಸಭಾಂಗಣವನ್ನು ಹಾಗೂ ಅದರ ಸುತ್ತಮುತ್ತಲಿನ ಎಲ್ಲಾ ಆವರಣಗಳನ್ನು ಸ್ಯಾನಿಟೈಸ್ ಮಾಡಲಾಗುವುದರಿಂದ ಯಾವುದೇ ಕಾಗದ ಪತ್ರ ಹಾಗೂ ವಸ್ತುಗಳನ್ನು ಆಸನಗಳ ಬಳಿಯೇ ಬಿಟ್ಟು ಹೋಗತಕ್ಕದ್ದಲ್ಲ.

–2

04. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು. ನಿಯಮ 330, ಗಮನ ಸೆಳೆಯುವ ಸೂಚನೆಗಳು, ನಿಯಮ 68ರ ಸೂಚನೆಗಳು. ಶೂನ್ಯ ವೇಳೆ, ಇತ್ಯಾದಿ ಸೂಚನೆಗಳಿಗೆ ಸರ್ಕಾರದವರು ನೀಡುವ ಲಿಖಿತ ಉತ್ತರಗಳನ್ನು ಸದನದಲ್ಲಿ ಮಂಡಿಸಿದ ತರುವಾಯ ಮಾನ್ಯ ಎಲ್ಲಾ ಸದಸ್ಯರಿಗೆ ಈ–ಮೇಲ್ ಮುಖಾಂತರ ಕಳುಹಿಸಲಾಗುವುದು.

05. ಪ್ರಸಕ್ತ ಅಧಿವೇಶನದಲ್ಲಿ ವಿಧಾನ ಪರಿಷತ್ತಿನ ಅಧಿವೇಶವನ್ನು ವೀಕ್ಷಿಸಲು ಸಾರ್ವಜನಿಕರಿಗೆ ಅವಕಾಶವಿರುವುದಿಲ್ಲ.

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ.
ಕರ್ನಾಟಕ ವಿಧಾನ ಪರಿಷತ್ತು.

**ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ.**

**www.kla.kar.nic.in/council/council.htm**